ಎಲ್ಲರ ಕಣ್ಣುಗಳು ನೀನಾಳನ್ನು ಅರಸುತ್ತಿದ್ದವು. ಅವರು ಒಂದೇ ಸಮನೆ ನನ್ನನ್ನು, 'ನೀನಾ ಎಲ್ಲಿ ಅಡಗಿದ್ದಾಳೆ?' ಎಂದು ಕೇಳುತ್ತಿದ್ದರು. ನೀನಾ ಯಾವಾಗ ಮೇಲಿನ ಕೋಣೆಯಿಂದ ಕೆಳಗಿಳಿದು ಬರುತ್ತಾಳೆಂದು ನಾನೂ ನಿರೀಕ್ಷಿಸುತ್ತಿದ್ದೆ. ಒಂದೆರಡು ಬಾರಿ, ಮೇಲಿನ ಕೋಣೆಗೆ ಹೋಗಿ, ಎಲ್ಲರೂ ಬಂದಿದ್ದಾರೆ, ನಿನ್ನನ್ನು ಕಾಯುತ್ತಿದ್ದಾರೆ ಎಂದು ಹೇಳಲು ಮನಸ್ಸಾಯಿತು. ಆದರೆ ಈ ಬಾರಿ ಸಹ ನನ್ನ ಗಂಡಸುತನ ನನ್ನನ್ನು ಆವರಿಸಿತು. ನನ್ನ ಆತ್ಮಾಭಿಮಾನ ನನ್ನನ್ನು ತಡೆಯಿತು.

ನೀನಾ ತುಂಬಾ ತಡ ಮಾಡಿ ಕೆಳಗಿಳಿದಳು. ಅವಳ ಪುತ್ರಿಯರು ಅವಳನ್ನು ಎರಡು ಮೂರು ಬಾರಿ ಕರೆಯಲು ಹೋಗಿದ್ದರು. ಅವಳು ಸಾಧಾರಣವಾಗಿ ಅಲಂಕರಿಸಿಕೊಂಡಿದ್ದಳು. ಆದರೆ ಅವಳು ನನ್ನ ಹುಟ್ಟುಹಬ್ಬದಂದು ಧರಿಸಬೇಕಿದ್ದ ಉಡುಪನ್ನು ಧರಿಸಿರಲಿಲ್ಲ, ಇದನ್ನು ನಾನು ಗಮನಿಸಿದೆ. ಅವಳು ಯೋಚಿಸಿದ್ದ ನೆಕ್ಲೇಸ್ ಸಹ ಧರಿಸಿರಲಿಲ್ಲ. ಆದರೆ ಅವಳು ಕೆಳಗಿಳಿಯುತ್ತಿರುವುದನ್ನು ನೋಡಿ ನನಗೆ ಸಂತೋಷವಾಯಿತು.

ಮಹಿಳೆಯರು ಮೌನವಾಗಿರುವರೇ? ಅದೂ ಲಾರಾಳಂಥ ಮಹಿಳೆಯರು! ನೀನಾ ಕೆಳಗೆ ಬಂದಾಗ ಲಾರಾ ಅವಳನ್ನು ನೋಡಿ ಕುಚೋದ್ಯವಾಡಿದಳು, 'ನೀನಾ, ನೀನು ನಿನ್ನ ಪತಿಯ ಹುಟ್ಟುಹಬ್ಬವನ್ನು ಹೀಗೇಕೆ ಆಚರಿಸುತ್ತಿದ್ದೀಯ? ಅತಿಥಿಗಳು ಬಂದಿದ್ದಾರೆ, ಆದರೆ ಹೆಂಡತಿಯೇ ನಾಪತ್ತೆ... ನಿನ್ನ ಭಾರತೀಯ ಸಂಸ್ಕೃತಿಯಲ್ಲಿ ಹೀಗೆಯೇ ನಡೆಯುವುದೇ? ನಾನಂತೂ ಭಾರತೀಯ ಸಂಸ್ಕೃತಿಯಲ್ಲಿ, 'ಗೆಸ್ಟ್ ಈಸ್ ಲೈಕ್ ಗಾಡ್!' ಎಂದು ಕೇಳಿದ್ದೇನೆ.'

ನೀನಾ ಮೆಲ್ಲನೆ ಉಸುರಿದಳು, 'ನನ್ನ ಆರೋಗ್ಯ ಸರಿಯಿಲ್ಲ. ತಲೆ ನೋಯ್ತಿದೆ...'

ಲಾರಾ ತನ್ನ ಡಾಕ್ಟರ್ ಪತಿಗೆ ಆದೇಶಿಸಿದಳು, 'ಡಾಕ್ಟರ್... ರೋಗಿಗೆ ತಲೆನೋವಿನ ಮಾತ್ರೆಯನ್ನು ಕೊಡಿ.'

'ನಾನು ನಾಲ್ಕು ಮಾತ್ರೆಗಳನ್ನು ತಿಂದಿದ್ದೇನೆ' ಎಂದಳು ನೀನಾ.

'ಯಾವ ಮಾತ್ರೆಯನ್ನು ತಿಂದಿರಿ?' ವಿಲಿಯಮ್ ಕೇಳಿದ.

ನೀನಾ ಮಾತ್ರೆಯ ಹೆಸರನ್ನು ಹೇಳಬೇಕೆಂದಿರುವಾಗ, ಜೂಲಿಯಾ ಅವಳ ಬಾಹುಗಳನ್ನು ಹಿಡಿದು ಸಹಾನುಭೂತಿಯಿಂದ ಹೇಳಿದಳು.

'ನೀನಾ, ನೀನು ಕೂತಿರು. ನಿಂತಿರಬೇಡ...'

'ಹೂಂ, ಕೂರ್ತೀನಿ... ನನಗೆ ತಲೆ ಸುತ್ತುತ್ತಿದೆ' ನೀನಾ ತನ್ನ ತಲೆಯನ್ನು ಹಿಡಿದುಕೊಂಡಳು.

'ಕೂತ್ಕೋ ನೀನಾ' ಶೀಲಾ ದೇವಿ ತಮ್ಮ ಮಗಳಿಗೆ ಹೇಳಿದಳು. ನಂತರ ಅವಳ ಬಳಿಗೆ ಬಂದು ಅವಳ ತಲೆಯನ್ನು ಒತ್ತಲಾರಂಭಿಸಿದಳು.

ಈ ಹೆಣ್ಣು... ಎಂದು ನಾನು ಮನಸ್ಸಿನಲ್ಲಿ ಬಡಬಡಿಸಿದೆ. ಸ್ವಲ್ಪ ಹೊತ್ತಿನ ಮುಂಚೆ ಇವಳಿಗೇನೂ ಇರಲಿಲ್ಲ. ಈಗ ಎಲ್ಲವೂ ಪ್ರಾರಂಭವಾಯಿತು. ತಲೆನೋವು, ಹೊಟ್ಟೆನೋವು... ಇವಳು ನನ್ನ ಹುಟ್ಟುಹಬ್ಬವನ್ನು ಕೆಡಿಸಲು ನೋಡುತ್ತಿದ್ದಾಳೆ.

ನಾನು ಅವಳ ಸಮೀಪಕ್ಕೆ ಹೋಗಲಿಲ್ಲ. ಅವಳೂ ನನ್ನ ಸಮೀಪಕ್ಕೆ ಬರಲಿಲ್ಲ. ಇಡೀ ಪಾರ್ಟಿಯಲ್ಲಿ ಅವಳ ಮೂಡ್ ಹಾಳಾಗಿತ್ತು. ಅವಳು ನನ್ನಿಂದ ದೂರ... ದೂರ... ಬೇಸರದಲ್ಲಿದ್ದಂತೆ ಕಂಡಳು. ನನ್ನೊಂದಿಗೆ ಡ್ಯಾನ್ಸ್ ಮಾಡಲು ಸಹ ಒಪ್ಪಲಿಲ್ಲ. ನನ್ನ ಬರ್ತ್‌ಡೇ ಕೇಕನ್ನು ಸಹ ತಿನ್ನಲಿಲ್ಲ. ಆರೋಗ್ಯ ಸರಿಯಿಲ್ಲ, ತಲೆ ಸುತ್ತುತ್ತಿದೆ ಎಂದೇ ಹೇಳುತ್ತಿದ್ದಳು.

ಪಾರ್ಟಿಯ ನಂತರ ಔತಣ ಕೂಟ ನಡೆಯಿತು, ಡ್ಯಾನ್ಸ್ ನಡೆಯಿತು, ಕೇಕ್ ಕತ್ತರಿಸಲಾಯಿತು, ಎಲ್ಲರೂ ಬಿಸಿ ಬಿಸಿ ಚಹಾ ಗುಟುಕರಿಸುತ್ತಿದ್ದರು. ಆಗಲೇ ಅವಳು ಅಕಸ್ಮಾತ್ ಎಲ್ಲರೆದುರು ಘೋಷಿಸಿದಳು, 'ನೋಡಿ, ನಾನೇನೋ ಹೇಳಬೇಕಿದೆ...!'

ಎಲ್ಲರೂ ಮೌನ ವಹಿಸಿದರು. ನಾನು ಕಡೆಗಂತೂ ಹೈಕಮಾಂಡ್ ಮೌನ ಮುರಿದು ತನ್ನ ಬಾಯಿಯನ್ನು ಬಿಚ್ಚಿತು ಎಂದು ಮುಗುಳ್ನಗುತ್ತಾ ಅವಳನ್ನೇ ನೋಡಿದೆ. ಬಹುಶಃ ಹೈಕಮಾಂಡಿನ ಮೂಡ್ ಸರಿಯಾಯಿತು.

'ನಾನು ನಿಮ್ಮೆಲ್ಲರೆದುರು ಒಂದು ವಿಷಯವನ್ನು ಹೇಳಬೇಕಿದೆ... ಇಂದು ನೀವೆಲ್ಲರೂ ಇಲ್ಲಿ ಸೇರಿದ್ದೀರಿ, ಇದು ಒಂದು ಒಳ್ಳೆಯ ಅವಕಾಶ. ನಾನು ತುಂಬಾ ವಿಷಾದದಿಂದ ನಿಮಗೆ ಹೇಳುವ ಸಂದರ್ಭ ಬಂದಿದೆ. ಅದೇನೆಂದರೆ, ನಾನು ಮತ್ತು ಪಾಲ್ ಬೇರೆಯಾಗುತ್ತಿದ್ದೇವೆ...'

ಎಲ್ಲರೂ ಗರಬಡಿದವರಂತೆ ನಿಂತರು. ಯಾರೂ ಏನೂ ಹೇಳದಾದರು. ನನಗೆ ನನ್ನೆದೆಯಲ್ಲಿ ಚಾಕುವನ್ನು ಇರಿಯಲಾಗುತ್ತಿದೆ ಎಂಬ ಅನುಭವವಾಯಿತು. ನನ್ನ ಐವತ್ತನೆಯ ಹುಟ್ಟುಹಬ್ಬದಂದು ಇಂಥ ಉಡುಗೊರೆ! ನಾನು ಅವಾಕ್ಕಾದೆ. ನೀನಾ ನನ್ನ ಐವತ್ತನೆಯ ಹುಟ್ಟುಹಬ್ಬದಂದು, ಒಂದು ಭವ್ಯ ಸಮಾರಂಭದಲ್ಲಿ ನನ್ನನ್ನು ಈ ರೀತಿಯಲ್ಲಿ ಅವಮಾನಿಸುತ್ತಾಳೆಂದು ನಾನು ಕನಸಿನಲ್ಲೂ ಯೋಚಿಸಿರಲಿಲ್ಲ. ಪ್ರಕೃತಿ ಹೆಣ್ಣಿನ ಮನಸ್ಸನ್ನು ಇಷ್ಟೊಂದು ಕಠಿಣ ಏಕೆ ಮಾಡಿದೆ? ನಾನು ಸುತ್ತಮುತ್ತ ನೋಡಿದೆ. ಎಲ್ಲರ ಕಣ್ಣುಗಳು ನನ್ನನ್ನೇ ನೋಡುತ್ತಿದ್ದವು, ಅವು ನನ್ನ ಪ್ರತಿಕ್ರಿಯೆಯನ್ನು ಅರಿಯಲು ಕಾತರಗೊಂಡಿದ್ದವು.

ನನ್ನ ಅಮ್ಮ, ಸಹೋದರ–ಸಹೋದರಿ, ನನ್ನ ಗೆಳೆಯರು, ಲೂಸಿ ಮತ್ತು ಗ್ರೇಸಿ ಎಲ್ಲರೂ ಕಲ್ಲಿನಂತೆ ನಿಂತಿದ್ದರು. ನೀನಾಳ ತಂದೆ ತಾಯಿ ಏನೂ ತೋಚದೆ ದಂಗಾಗಿ ಕೂತಿದ್ದರು. ಕರೀನಾ ಮತ್ತು ಜೊಹಾನಾರ ಮುಖದಲ್ಲಿ ದುಃಖ ಆವರಿಸಿತ್ತು. ನನ್ನ ಗೆಳೆಯರು ಅಕ್ಕಪಕ್ಕ ನೋಡುತ್ತಿದ್ದರು. ನನ್ನ ಕಣ್ಣುಗಳು ತುಂಬಿ ಬಂದು ಹೇಳಿದೆ, 'ಎಕ್ಸ್‌ಕ್ಯೂಸ್ ಮಿ...' ನಂತರ ಬೇಗ ಬೇಗನೇ ಬಾತ್‌ರೂಮಿಗೆ ಹೊರಟು ಹೋದೆ. ಅಲ್ಲಿಗೆ ಹೋಗಿ ಬಿಕ್ಕಳಿಸಿ ರೋದಿಸಿದೆ. ನನ್ನ ಕಣ್ಣೀರನ್ನು ನನ್ನ ಕಿಲ್ಟ್‌ನಿಂದ ಒರೆಸಿಕೊಂಡೆ. ನಾನು ಅದೆಷ್ಟು ಆಸೆಯಿಂದ ಈ ಡ್ರೆಸ್ ಧರಿಸಿದ್ದೆ. ಈಗ ಈ ಡ್ರೆಸ್ ನನ್ನನ್ನು ತುಂಬಾ ಹೀನಾಯವಾಗಿ ರೇಗಿಸುತ್ತಿತ್ತು. ನಾನು ನಿಜವಾಗಿಯೂ ಹಳ್ಳಿ ಗುಗ್ಗು... ಒಂದು ಹೆಣ್ಣು ನನ್ನನ್ನು ಇಷ್ಟು ಅವಮಾನಿಸಿದಳು... ನಿನಗೆ ಧಿಕ್ಕಾರ...

'ಪಾಲ್...' ಕೋಮಲ ಧ್ವನಿಯೊಂದು ನನ್ನ ಕಿವಿಗಳಿಗೆ ಬಿತ್ತು.

ನಾನು ಹೊರಳಿ ನೋಡಿದೆ. ಅಮ್ಮ ನಿಂತಿದ್ದಳು. ನಾನು ಅಮ್ಮನನ್ನು ತಬ್ಬಿಕೊಂಡೆ; ಮತ್ತೆ ಅಮ್ಮನಿಗೆ ಮಗುವಾಗಿದ್ದೆ. ನನ್ನ ಐವತ್ತನೆಯ ಹುಟ್ಟುಹಬ್ಬದಂದು ಅಮ್ಮನ ಮಡಿಲಿನಲ್ಲಿ ತುಂಬಾ ರೋದಿಸಿದೆ.

ಅಮ್ಮ ನನ್ನನ್ನು ನೇವರಿಸುತ್ತಾ ನನಗೆ ಧೈರ್ಯ ಹೇಳುತ್ತಿದ್ದಳು, 'ಜೀವನದಲ್ಲಿ ಬಹಳಷ್ಟು ಕಾರ್ಯಗಳು ಮನುಷ್ಯನ ಸ್ವಭಾವವನ್ನು ಸೃಷ್ಟಿಸುತ್ತವೆ. ನೀನಾ ಒಂದು ಪ್ರಮುಖ ಶೈಕ್ಷಣಿಕ ಸಂಸ್ಥೆಯಲ್ಲಿ ಅಧ್ಯಯನ ಮಾಡಿದ್ದಾಳೆ. ಒಂದು ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸ ಮಾಡುತ್ತಾಳೆ. ಅವಳ ಬಳಿ ಐಶ್ವರ್ಯ, ಪ್ರತಿಷ್ಠೆ ಎಲ್ಲವೂ ಇವೆ. ಆದರೆ ಅವಳ ಆಸೆಗಳು ಅರ್ಧಂಬರ್ಧ. ಸಾಕಷ್ಟು ಅರ್ಧಂಬರ್ಧ ಆಸೆಗಳು ಸಾಮಾನ್ಯವಾಗಿ ವ್ಯಕ್ತಿಗಳು ಅದೂ ವಿಶೇಷವಾಗಿ ಮಹಿಳೆಯರನ್ನು ಕ್ರೂರವಾಗಿಸುತ್ತವೆ.'

ಹುಟ್ಟುಹಬ್ಬದ ಸಮಾರಂಭದ ಸಂತೋಷ, ವಿಷಾದದಲ್ಲಿ ಬದಲಾಗಲು ತಡವಾಗಲಿಲ್ಲ. ಮೌನವಹಿಸಿದ್ದ ಅತಿಥಿಗಳು, ಮೌನವಾಗಿಯೇ ಹೊರಟು ಹೋದರು. ಅವರು ಯಾವುದೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಿಲ್ಲ. ವಾಚಾಳಿ ಲಾರಾ ಸಹ ಹೆಚ್ಚು ಹೇಳದಾದಳು. ಅವಳು ನನ್ನನ್ನು ಮತ್ತು ನೀನಾಳನ್ನು ನೋಡುತ್ತಾ ಮೆಲು ಧ್ವನಿಯಲ್ಲಿ ಹೇಳಿದಳು, 'ನಾವು ಸ್ಕಾಟ್ಲೆಂಡಿಗೆ ಇದಕ್ಕಾಗಿ ಬಂದಿರಲಿಲ್ಲ... ಸೋ ಸಾರಿ...'

ಅಮ್ಮ ತುಂಬಿ ಬಂದ ಕಣ್ಣುಗಳಿಂದ ಹೇಳಿದಳು, 'ಆಗಿದ್ದು ಕೆಡುಕೇ ಆಯಿತು.'

ನನ್ನ ಮಿತ್ರರಾದ ಎಂಡ್ರಿಯಾಜ್ ಹೋಗುವಾಗ ನನ್ನ ಹೆಗಲನ್ನು ತಟ್ಟಿ ಮೆಲ್ಲನೆ ಉಸುರಿ ಹೋದ, 'ಸೋಮವಾರ ಶಾಲೆಯಲ್ಲಿ ಭೇಟಿಯಾಗೋಣ...'

ಶೀಲಾ ದೇವಿ ಮತ್ತು ರಾಮಚಂದ್ರರಿಗೆ ತಮ್ಮ ಮಗಳ ಚಿಂತೆಯಿತ್ತು, ಅವರು ಅವಳ ಬಳಿ ಬಂದು, ಅವಳ ಮೈದಡವಿ, ಸಮಾಧಾನಪಡಿಸಿ ಹೊರಟು ಹೋದರು. ಅವರು ನನಗೆ ಒಂದು ಶಬ್ದವನ್ನೂ ಹೇಳಲಿಲ್ಲ. ಅವರು ಹೋಗುವಾಗ, ನಾನು ತುಂಬಾ ಪಾಪಿ, ಮಗಳು ಇಂಥ ತೀರ್ಮಾನ ಕೈಗೊಳ್ಳಲು ನಾನು ಅವಳ ಮೇಲೆ ಅದೆಷ್ಟು ದಬ್ಬಾಳಿಕೆ ಮಾಡಿರಬಹುದು ಎಂದು ಯೋಚಿಸುತ್ತಾ, ನನ್ನನ್ನು ತಿಂದು ಹಾಕುವ ದೃಷ್ಟಿಯಿಂದ ನೋಡುತ್ತಾ ಹೋದರು.

ಮನೆಯಲ್ಲಿ ನಾನು, ನೀನಾ ಮತ್ತು ನಾಲ್ವರು ಪುತ್ರಿಯರು ಮಾತ್ರ ಉಳಿದೆವು. ಕರೀನಾ, ಜೊಹಾನಾ, ಲೂಸಿ ಮತ್ತು ಗ್ರೇಸಿ ಮಾತನಾಡದೆ ತಮ್ಮ ತಮ್ಮ ಕೋಣೆಗೆ ಹೊರಟು ಹೋದರು.

ಈ ಕಥೆ ಇಲ್ಲಿಗೇ ನಿಲ್ಲಲಿಲ್ಲ. ಎಲ್ಲರೂ ಹೋದ ನಂತರ ನೀನಾ ಸ್ಟಡಿ ರೂಮಿಗೆ ಹೋಗಿ ಕಂಪ್ಯೂಟರ್ ತೆರೆದು ಒಂದು ಫಾರ್ಮ್ ಡೌನ್‌ಲೋಡ್ ಮಾಡಿದಳು. ಅವಳು ಪಾರದರ್ಶಕ ಮತ್ತು ಸ್ಪಷ್ಟವಾದ ಮಹಿಳೆಯಾಗಿದ್ದಳು. ಅವಳು ಯಾವುದೇ ವಿಷಯವನ್ನು ಹಿಂದಿನಿಂದ ಅಥವಾ ಮರೆಮಾಚಿ ಮಾಡುತ್ತಿರಲಿಲ್ಲ, ಅದರಲ್ಲಿ